# ವಿಶ್ವನಂದಿನಿ ಲೇಖನಮಾಲೆ – 69

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ
## ಇಪ್ಪತ್ತೆಂಟನೆಯ ಪದ್ಯ

ಮತ್ತು ಶರಣಾಗತವಾತ್ಸಲ್ಯವೊಂದೇ ಅಲ್ಲ ನಿಗ್ರಹಾನುಗ್ರಹಸಾಮರ್ಥ್ಯದಲ್ಲಿಯೂ ಪರಮಾತ್ಮನನ್ನು ಮೀರಿಸುವವರು ಮತ್ತೊಬ್ಬರಿಲ್ಲ ಎಂಬ ಚಿಂತನೆಯನ್ನು ಮುಂದಿನ ಶ್ಲೋಕದಲ್ಲಿ ಮಾಡುತ್ತಾರೆ –

**ಹಗೆಯರಿಗೆ ವರವೀವರಿಬ್ಬರು**
**ತೆಗೆಯಲರಿಯರು ಕೊಟ್ಟ ವರಗಳ**
**ತೆಗೆದುಕೊಡುವ ಸಮರ್ಥರಾರೀ ಜಗಕೆ ನಿನ್ನಂತೆ ।**
**ಸುಗುಣರಿನ್ನಾರುಂಟು ಕದನವ**
**ಬಗೆದು ನಿನ್ನೊಳು ಜಯಿಸುವವರೀ**
**ಜಗದೊಳುಂಟೇ ದೇವ ರಕ್ಷಿಸು ನಮ್ಮನನವರತ ॥ ೨೮ ॥**

ಹಗೆಯರಿಗೆ ಸ್ವಾಭಾವಿಕವಾಗಿ ಜಗತ್ತಿನ ದ್ವೇಷಿಗಳಾದ ಅಸುರರಿಗೆ ಇಬ್ಬರು ರುದ್ರ ಬ್ರಹ್ಮರು ವರವೀವರು ಬೇಡಿದ ವರವನ್ನು ನೀಡುತ್ತಾರೆ.

ಆದರೆ, ತಾವೇ ಕೊಟ್ಟ ವರಗಳ ತೆಗೆಯಲರಿಯರು. ಒಮ್ಮೆ ವರ ಕೊಟ್ಟ ಮೇಲೆ ಮತ್ತೆ ಅದನ್ನು ಹಿಂತೆಗೆದುಕೊಳ್ಳುವ ಶಕ್ತಿಯಿಲ್ಲದವರು. ಹಿರಣ್ಯಕಶಿಪುವಿಗೆ ವರ ನೀಡಿ ಅವನನ್ನು ಸಂಹರಿಸಲು ಬ್ರಹ್ಮದೇವರೇ ನಿನ್ನ ಮೊರೆಹೊಕ್ಕಿ ಬಂದರು. ಭಸ್ಮಾಸುರನಿಗೆ ವರವಿತ್ತು ತನ್ನ ಪ್ರಾಣಕ್ಕೇ ಸಂಚಕಾರವನ್ನು ತಂದುಕೊಂಡ ಪಶುಪತಿ ನಿನ್ನನ್ನೇ ಮೊರೆಹೊಕ್ಕ.

ಆದರೆ ನೀನು ವರವನ್ನೂ ನೀಡಬಲ್ಲೆ. ನೀಡಿದ ವರವನ್ನು ಸಹಜವಾಗಿ ಹಿಂತೆಗೆದುಕೊಳ್ಳಬಲ್ಲೆ. ನಂದ ಯಶೋದೆಯರಿಗೆ ಕಂದನಾಗಿ, ಗೋಕುಲದ ಕಣ್ಮಣಿಯಾಗಿ ಹನ್ನೊಂದು ವರ್ಷಗಳ ಕಾಲ ಅವರಿಗೆ ಅದ್ಭುತವಾದ ತನ್ನ ಸಾಂಗತ್ಯಸುಖವನ್ನು ನೀಡಿದ ಭಗವಂತ ಮಥುರೆಗೆ ಬಂದ ಬಳಿಕ, ದ್ವಾರಕೆಗೆ ಹೋದ ಬಳಿಕ ಮುಂದಿನ ತೊಂಭತ್ತನಾಲ್ಕು ವರ್ಷಗಳಲ್ಲಿ ಒಮ್ಮೆಯೂ ಗೋಕುಲಕ್ಕೆ ಬರುವದಿಲ್ಲ. ಕಾರಣ, ಅವರ ಪುಣ್ಯವಿದ್ದದ್ದು ಅಷ್ಟೇ. ಅವರಿಗೆ ಲಭ್ಯವಿದ್ದದ್ದು ಅಷ್ಟೇ.

ಹದಿನೆಂಟೇ ದಿವಸಗಳಲ್ಲಿ ಅವನನ್ನು ಮಣ್ಣಾಗಿಸಿಬಿಟ್ಟ. ಕಾರಣ, ಅವನಿಗೆ ಯೋಗ್ಯವಾದದ್ದು ಅದೇ.

ತನ್ನ ಪ್ರಶಾಂತಸ್ವರೂಪವನ್ನು ತಿಳಿಯದೇ, ತನ್ನ ಕಾರುಣ್ಯದ ಗುಣವನ್ನು ಅರಿಯದೇ, ತನ್ನನ್ನು ಭಜಿಸಲರಿಯದ ರಾಜಪುತ್ರಿಯರಾದ ಅಂಬಿಕಾ ಅಂಬಾಲಿಕೆಯರಿಗೆ ಮಕ್ಕಳ ವರವನ್ನು ನೀಡಿದರೂ ಆ ಮಕ್ಕಳನ್ನು ಕುರುಡ, ರೋಗಿಗಳನ್ನಾಗಿ ಮಾಡಿದ. ವರವನ್ನೂ ಕೊಡಲೂ ಬಲ್ಲ. ಕೊಟ್ಟ ವರವನ್ನು ಪೂರ್ಣವಾಗಿ ಹಿಂತೆಗೆದುಕೊಳ್ಳಲೂ ಬಲ್ಲ. ಎಷ್ಟು ಬೇಕೋ ಅಷ್ಟು ಮಾತ್ರ ಅನುಗ್ರಹವನ್ನು ಮಾಡಬಲ್ಲ.

ಬರಿಯ ಅನುಗ್ರಹವನ್ನಲ್ಲ ನಿಗ್ರಹವನ್ನೂ ಹಾಗೆಯೇ. ಅವನಂತೆ ನಿಗ್ರಹ ಮಾಡುವವರಿಲ್ಲ. ಮಾಡಿದ ನಿಗ್ರಹವನ್ನು ಕಳೆದು ಮತ್ತೆ ಭೂರಿ ಅನುಗ್ರಹವನ್ನು ಮಾಡಬಲ್ಲ. ತನ್ನ ಸ್ವಾತಂತ್ರ್ಯವನ್ನು ಪ್ರಕಟಿಸಲು ಅನಂತಜೀವರಾಶಿಗಳಿಗೂ ಪರಮಾತ್ಮ ಸಂಸಾರವನ್ನು ನೀಡಿ ನಿಗ್ರಹಿಸುತ್ತಾನೆ. ಅದೇ ಪರಮಾತ್ಮನ ಕೇವಲ ಭಕ್ತಿಯಿಂದ ತೃಪ್ತನಾಗಿ

ಅವರ ಸಂಸಾರವನ್ನು ಕಳೆಯುತ್ತಾನೆ. “ಬಂಧಕೋ ಭವಪಾಶೇನ ಭವಪಾಶಾಚ್ಚ ಮೋಚಕಃ”

ನಿನ್ನಂತೆ ಈ ಜಗಕೆ ವರ ಶಾಪಗಳನ್ನು ತೆಗೆದು ಕೊಡುವ ಕೊಟ್ಟು ತೆಗೆಯುವ ಸಮರ್ಥರಾರುಂಟು ? ನಿನ್ನಂತೆ ಸುಗುಣರಿನ್ನಾರುಂಟು ? ಕೇವಲ ತನ್ನ ಇಚ್ಛೆಯಿಂದ ಸಮಸ್ತ ಜೀವರಾಶಿಗಳನ್ನೂ ಬಂಧನದಲ್ಲಿಡುತ್ತಾನೆ, ತನ್ನ ಇಚ್ಛೆಯಿಂದಲೇ ಅವರಿಗೆ ಅದರಿಂದ ಮೋಕ್ಷವನ್ನೂ ನೀಡುತ್ತಾನೆ. ಬ್ರಹ್ಮರುದ್ರರ ಹಾಗೆ ತಾನು ಮಾಡಿದ ನಿಗ್ರಹಾನುಗ್ರಹಗಳನ್ನು ತಪ್ಪಿಸುವಂತೆ ಮತ್ತೊಬ್ಬರ ಮೊರೆ ಹೋಗುವವನಲ್ಲ ನಾರಾಯಣ.

ಅಷ್ಟೇ ಅಲ್ಲ. ನಿನ್ನಿಂದ ಯಾರೂ ಯೋಗ್ಯತೆಗೆ ಮೀರಿ ವರಗಳನ್ನು ಪಡೆಯುವದಿಲ್ಲ. ಪಡೆದರೂ ಭಸ್ಮಾಸುರ ಶಿವನನ್ನು ಕಾಡಿದ ಹಾಗೆ ನಿನ್ನನ್ನು ಕಾಡುವವರಿಲ್ಲ, ಅರ್ಥಾತ್ ನಿನ್ನನ್ನು ಮಣಿಸುವ ಸಾಮರ್ಥ್ಯ ಯಾರಿಗಿಲ್ಲ ನೀನು ಅಜೇಯ ಎಂಬ ಚಿಂತನೆಯನ್ನು ಮಾಡುತ್ತಾರೆ ನಿನ್ನೊಳು ಕದನವ ಬಗೆದು ನಿನ್ನ ಮೇಲೆ ಯುದ್ಧಕ್ಕೆ ಬಂದು ಜಯಿಸುವವರು ಈ ಜಗದೊಳುಂಟೇ ಈ

ಚೇತನಪ್ರಪಂಚದಲ್ಲಿದ್ದಾರೆಯೇ ? ಇಲ್ಲ. ಪ್ರಳಯದ ಕಾಲದಲ್ಲಿ ಬ್ರಹ್ಮ ರುದ್ರಾದಿಗಳನ್ನೇ ಸಂಹರಿಸಿ ಎಲ್ಲರನ್ನೂ ಒಡಲಲ್ಲಿಟ್ಟುಕೊಳ್ಳುವ ನಿನ್ನ ಸಾಮರ್ಥ್ಯವನ್ನು ಎದುರಿಸಿ ನಿಲ್ಲುವರು ಯಾರು ?

ಓ ಮಹಾಸಾಮರ್ಥ್ಯದ ದೇವ ! ನೀನೆಂದಿಗೂ ಹಿಂತೆಗೆದುಕೊಳ್ಳದ ಮೋಕ್ಷದ ವರವನ್ನಿತ್ತು ನಮ್ಮನ್ನು ಅನವರತ ಅನಂತಕಾಲದವರೆಗೆ ಅನುಗ್ರಹಿಸುತ್ತಲೇ ರಕ್ಷಿಸು[1] ॥ ೨೮ ॥

---

[1] **ಉಪನ್ಯಾಸದಲ್ಲಿನ ವಿಶೇಷಾಂಶಗಳು**

ಹಗೆಯರಿಗೆ ವರವೀವರಿಬ್ಬರು, ತೆಗೆಯಲರಿಯರು ಕೊಟ್ಟ ವರಗಳ ಎಂದು ಶ್ರೀ ಕನಕದಾಸಾರ್ಯರು ಹೇಳುತ್ತಾರೆ. ಬ್ರಹ್ಮದೇವರು  ಕೊಟ್ಟವರವನ್ನು ಬ್ರಹ್ಮದೇವರಿಗೆ ಸಮಾನರಾದ ಮುಖ್ಯಪ್ರಾಣದೇವರು ಮೀರಿರುವದನ್ನು ಹತ್ತಾರು ಕಡೆಯಲ್ಲಿ ಕಾಣುತ್ತೇವೆ. ಬ್ರಹ್ಮದೇವರ ವರವನ್ನು ವಾಯುದೇವರಿಗೆ ಮೀರಲಿಕ್ಕೆ ಸಾಧ್ಯ ಎಂದ ಬಳಿಕ ಬ್ರಹ್ಮದೇವರಿಗೂ ಸಾಧ್ಯ ಎಂದು ನಿರ್ಣೀತವಾಯಿತು. ಅಂದ ಮೇಲೆ ದಾಸರಾಯರು ಹೀಗೆ ಹೇಳಿದ್ದು ಎಷ್ಟು ಸರಿ ಎಂಬ ಪ್ರಶ್ನೆಗೆ ಶ್ರೀ ಕನಕದಾಸರೇ ನೀಡಿರುವ ಉತ್ತರವನ್ನು — ಶ್ರೀಮಧ್ವಸಿದ್ಧಾಂತದ ಶ್ರೇಷ್ಠ ಸಿದ್ಧಾಂತವನ್ನು — ನಾವಿಲ್ಲಿ ಕೇಳುತ್ತೇವೆ. ದಾಸಸಾಹಿತ್ಯ ಎಷ್ಟು ಗಂಭೀರ ಎನ್ನುವದಕ್ಕೆ ದೃಷ್ಟಾಂತವಾಗಿ ನಿಲ್ಲುವ ಪದ್ಯವಿದು. ತಪ್ಪದೇ ಕೇಳಿ. ತೆಗೆದು ಕೊಡುವ ಸಮರ್ಥರಾರೀ ಎಂಬ ಅದ್ಭುತವಾಕ್ಯದ ಅರ್ಥಾನುಸಂಧಾನದೊಂದಿಗೆ.

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು
ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಿಗೆ,
ಶ್ರೀ ವೇದವ್ಯಾಸದೇವರಿಗೆ
ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491